Regd No. M. 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 30 ಸಂಚಿಕೆ 130] ಬುಧವಾರ 22—1—47 [ಬಿಡಿ ಪ್ರತಿ 3 ಪೈ

ಖಿಲಾಫತ್ - ಸಂಸ್ಥಾರ್ಥ ಸ್ಕೀಂ

*

[ಮುಂದುವರಿದುದು]

'ಪುರುಷಾರ್ಥ' ಪ್ರಕಾಶಕರ ಅಭಿಪ್ರಾಯಗಳು

ಮೇಲಿನ ಲೇಖನದಲ್ಲಿ ಮಹಮದೀಯರ ಭಾವನೈಖರಿಯನ್ನು ತಿಳಿಯ ಪಡಿಸುವ ಎಲ್ಲಾ ಪ್ರಧಾನಾಂಶಗಳೂ ತಿಳಿಸಲ್ಪಟ್ಟಿವೆ. ಒಂದನ್ನೂ ಬಿಟ್ಟಿರುವುದಿಲ್ಲ. ಮೇಲ್ಕಂಡ ಪುಸ್ತಕವು ಮಹಮದೀಯ ಪಂಗಡದವರಲ್ಲಿ ಪ್ರಚಾರಕ್ಕಾಗಿಯೇ ಪ್ರಕಟಿಸಲ್ಪಟ್ಟಿದೆಯಾದುದರಿಂದ ಅದನ್ನು ಸಂಪಾದಿಸುವಿಕೆಯು ಬಹಳ ಕಷ್ಟವಾಯಿತು. ಮುಸ್ಲಿಮ್ ಮೆಜಾರಿಟಿ ಇರುವ ಪಂಜಾಬು, ಸಿಂಧು ಪ್ರಾಂತ್ಯಗಳಲ್ಲಿ ಇದು ಹೆಚ್ಚಾಗಿ ಪ್ರಚಾರವಾಗಿದೆ. ಆ ಗ್ರಂಥದಲ್ಲಿರುವ ಪ್ರಣಾಲಿಕೆಯನ್ನು ಮುಸ್ಲಿಂರು ಅವಲಂಬಿಸಿರುವರು. 50 ವರ್ಷಗಳ ಹಿಂದೆ ಮಸೀದಿಗಳ ಸಮೀಪದಲ್ಲಿ ಬಾಜಾಬಜಂತ್ರಿಗಳನ್ನು ನುಡಿಸಕೂಡದೆಂಬ ಮಾತೇ ಎಲ್ಲಿಯೂ ಕೇಳಬರುತ್ತಿರಲಿಲ್ಲ; ಪಾಕೀಸ್ತಾನದ ಮಾತು ಮೊದಲೇ ಇರಲಿಲ್ಲ.

ಒಂದು ನಿಯಮವನ್ನನುಸರಿಸಿ ಇದೆಲ್ಲವೂ ನಡೆಯುತ್ತಿದೆ. ಒಂದು ಸೋಪಾನದಿಂದ ಇನ್ನೊಂದು ಸೋಪಾನಕೆ ಮುಸ್ಲಿಂರು ಏರುತ್ತಿದ್ದಾರೆ. 50 ವರ್ಷಗಳ ಹಿಂದೆ ಕೂಡ ಅವರ ಮನಸ್ಸಿನಲ್ಲಿ ಈ ಸಂಕಲ್ಪಗಳಿದ್ದವು. ಹೊರಗೆಡವಬೇಕಾಗಿ ಬಂದ ಸಮಯದಲ್ಲಿ ವಿನಹಾ ಯಾವುದನ್ನೂ ಹೊರಗೆಡವಲಿಲ್ಲ. ಇದು ನಿಜವಾಗಿ ಒಳ್ಳೇ ಚಾಕಚಕ್ಯತೆ. ಈ 50 ವರ್ಷಗಳಿಂದ ಅವರು ಸಿಕ್ಕಿದಷ್ಟು ಎಳೆದುಕೊಳ್ಳುತ್ತಿದ್ದಾರೆ. ಮಿಕ್ಕವಕ್ಕಾಗಿ ಗಲಾಟೆಮಾಡುತ್ತಾ ಇದ್ದಾರೆ.

ಸರಕಾರದವರ ಬೆಂಬಲ

ಮೌಲಾನಾ ಷೌಕತ್ತಾಲಿಯು ಒಂದು ಬಾರಿ, ಸಾಧಾರಣ ಮುಸ್ಲಿಂ, ತನ್ನ ದೃಷ್ಟಿಯಲ್ಲಿ ಮಹಾತ್ಮಾ ಗಾಂಧಿಗಿಂತ ಕೂಡ ಹಿರಿಯನೆಂದು ತಿಳಿಸಿದರು. ಮಹಾತ್ಮನೇ ಆ ಮಾತಿಗೆ ಒಪ್ಪಿಕೊಂಡನು. ಈ ಒಗೆಯ ಸುಭಾಷಿತಗಳೇ ಈ ಗ್ರಂಥಗಳ ತುಂಬಾ ತುಂಬಿದೆ. ಲಾಹೋರು 'ಸಿವಿಲ್ ಮತ್ತು ಮೀಲಿಟರಿ ಗೆಜಿಟ್' ನಲ್ಲಿ ಈ ಗ್ರಂಥವು ಸೇರಿಸಲ್ಪಟ್ಟು ಒಳ್ಳೇ ಪ್ರಚಾರಕ್ಕೆ ಅವಕಾಶ ಮಾಡಲ್ಪಟ್ಟಿತು. ಈ ಗ್ರಂಥವು ನಾಲ್ಕು ಸಲ ಮುದ್ರಿತವಾಗಿದ್ದರೂ ಜಾತಿಮತ ತನ್ನು ಹೆಚ್ಚಿಸುತ್ತಿರುವ ತಪ್ಪಿತ ಮುದ್ರಣಕಾರರ ಮತ್ತು ಪ್ರ ಕಾಶಕರ ಮೇಲೆ ಕಾರ್ಯಕ್ರಮವನ್ನು ಕೈಗೊಂಡಿರುವುದಿಲ್ಲ.

ಹಿಂದುವು ಯಾವನಾದರೂ ಜಾತಿ ಮತ ದ್ವೇಷಗಳನ್ನುಂಟುಮಾಡುವ ಇಂಥಾ ಗ್ರಂಥಗಳನ್ನು ಬರೆದಿದ್ದಲ್ಲಿ ಆತನ ಸ್ವಮತಸ್ಥರು ಆತನನ್ನು ಬಯ್ಯುವುದಲ್ಲದೆ, ಸರಕಾರದವರು ಕಾರಾಗೃಹದಲ್ಲಿ ಬಂಧಿಸುತ್ತಿದ್ದರು.

ಈ ವಿಷಯದಲ್ಲಿ ಸರ್ಕಾರವು ಅಂಥಾ ಕೆಲವರನ್ನು ಮಾಡಲಿಲ್ಲ ಪಾಕೀಸ್ತಾನ ವಾದಗಳಿಗೆ ಸರಕಾರದವರು ಬೆಂಬಲ ಕೊಟ್ಟದ್ದು ಈ ರೀತಿಯಲ್ಲಿಯೆ.

(ತ್ರಿ) [ನಾಳೆ ಸಂಚಿಕೆ ಸೋದಿ

ಮಲ್ಟಾಕ್ಕೆ ಸ್ವರಾಜ್ಯ

ಲಂಡನ್ ಜ 20 — ಕಲೋನಿಯಲ್ ಆಫೀಸಿನಿಂದ ಪ್ರಕಟವಾದ ವರದಿಯಲ್ಲಿ ಮಾಲ್ಟಾಕ್ಕೆ ಒಂದು ವಿಧದ ಸ್ವಾತಂತ್ರ್ಯ ಕೊಡುವ ವಿಚಾರವಿದೆ.

ವರ್ತಮಾನ ಸಂಗ್ರಹ

ಪೋರ್ಟೊ ರಫೀನಾ ಜ 20 — ಒಂದು ಗ್ರೀಕ್ ಹಡಗು ಮೈನಿಗೆ ತಗುಲಿ ಒಡೆದು ಹೋದ್ದರಿಂದ 300 ಮಂದಿಯು ಸತ್ತಿರುವರೆಂದು ಹೇಳಲಾಗಿದೆ.

ಕಾಂವಾರ ಜ 19 — ಮಾಮ್ಲೆದಾರರ ಅಜ್ಞೆಯನ್ನು ಅಡ್ಡಪಡಿಸಲು ಇಲ್ಲಿ 300 ಮಂದಿ ರೈತರು (ಈ ಪೈಕಿ 100 ಮಂದಿ ಸ್ತ್ರೀಯರು) ಸತ್ಯಾಗ್ರಹ ನಡಿಸಿದರು. 7 ಮಂದಿ ದಸ್ತಗಿರಿ ಮಾಡಲ್ಪಟ್ಟಿದ್ದಾರೆ.

ಕೊಲಂಬೋ ಜ 20 — ಅಂತರ ಏಷ್ಯಾ ಸಮ್ಮೇಳನಕ್ಕೆ ಸಿಲೋನಿನ 4 ಮಂದಿ ಮಂತ್ರಿಗಳು ಬರಲಿರುವರು.

ಕರಾಚಿ ಜ 20 — ಜಾವಾದಿಂದ ಭಾರತಕ್ಕೆ ಮುಚ್ಚಿಕೊಂಡು ಬಂದ ಸಿಂಧ್ ವ್ಯಾಪಾರಿಯು ತಂದ 25000 ರೂ ಬೆಲೆಯ ಡಾಲರುಗಳನ್ನು ಕಸ್ಟಮ್ ಅಧಿಕಾರಿಗಳು ಪತ್ತೆ ಹಚ್ಚಿ ಪಶಪಡಿಸಿಕೊಂಡರು.

ನವದೆಹಲಿ ಜ 21 — ರಾಜ್ಯಾಂಗ ರಚನಾ ಸಭೆಯಲ್ಲಿ ಶ್ರೀ ಜಯಕರವರು ತಮ್ಮ ತಿದ್ದು ಪಡಿಯನ್ನು ವಾಪಸ್ ತೆಗೆದುಕೊಂಡರು.

— ರಾಜ್‌ಕಮಲ್ ಮೈಸೂರು —

22-1-47 ನೇ ಬುಧವಾರದಿಂದ ಆಮೋಘ ಪ್ರಾರಂಭ

ಪ್ರತಿಜ್ಞಾ

ಪ್ರತಿದಿನ ಮೂರು ಆಟಗಳು] (ಹಿಂದಿ)

ಭೂಮಿಕೆ — * ಮೋತಿಲಾಲ್ * ಸ್ವರ್ಣಲತ * ಬೇಬಿ ಮಿನಾ * ನಾಗೇಂದ್ರ * ವೀಣಕುಮಾರಿ * ಸುನೇತ್ರ * ಬೂಡೊ ಆದ್ವಾನಿ * ಮಜೀದ್, ಮುಂತಾದವರು

ಸಿ. ಬಿ. ಎ. ಚಂದ್ರಯ್ಯ (ಮೈಸೂರು) ರಿಲೀಸ್

Vijaya Agencies, Mysore

ಕಲ್ಕತ್ತಾದಲ್ಲಿ ಲಾಠೀಚಾರ್ಜು

ಕಲ್ಕತ್ತಾ ಜ 21— ವಿಯಟ್‌ನಾಂ ದಿನಾಚರಣೆ ಸಂಬಂಧದಲ್ಲಿ ವಿದ್ಯಾರ್ಥಿಗಳ ನಡೆಸಿದ ಪೆರವಣಿಗೆ ಚದುರಿಸಲು ಪೋಲೀಸರು 3 ಸಾರಿ ಟೀರ್ ಗ್ಯಾಸ್ ಉಪಯೋಗಿಸಿದರು. ಇದಕ್ಕೆ ಮುಂಚೆ ಪೋಲೀಸರು ಲಾಠೀಚಾರ್ಜು ಮಾಡಿದ್ದರಿಂದ 12 ಮಂದಿ ಗಾಯಗೊಂಡರೆಂದು ಹೇಳಲಾಗಿದೆ ಈ ಸಂದರ್ಭದಲ್ಲಿ 60 ಮಂದಿಯ ದಸ್ತಗಿರಿಯಾಗಿದೆ.

ಹಿಂದೂ-ಮುಸ್ಲಿಂ ಐಕ್ಯಕ್ಕಾಗಿ

ಶಿರೋನ್ದಿ ಜ 20 — ಗಾಂಧೀಜೀ ಇಲ್ಲಿಗೆ ತಲಪಿದರು. ಹಿಂದೂ ಮುಸ್ಲಿಂರ ಐಕ್ಯಕ್ಕಾಗಿ 25 ದಿವಸಗಳಿಂದ ಉಪವಾಸ ಮಾಡುತ್ತಿರುವ ಮಿಸ್ ಅಮಾಟುಸ್ ಸಲಾಮರ ಹಾಸಿಗೆ ಹತ್ತಿರ ಬಂದು ಕುಳಿತರು. ಸಲಾಮರ ಸ್ಥಿತಿ ಚಿಂತಾಜನಕವಾಗಿರುವದು. ರಾತ್ರೆ ಸಲಾಮರು ಉಪವಾಸವನ್ನು ಮುಕ್ತಾಯಗೊಳಿಸಿದರು. ಅವರಿಗೆ ಕಿತ್ತಳೆ ರಸವನ್ನು ಕುಡಿಯಲು ಕೊಟ್ಟರು.

ಕಾಳಸಂತೆಗಾರರಿಗೆ ಮರಣದಂಡನೆ

ಬೆಲ್‌ಗ್ರೇಡ್ ಜ 20—ಕಳುವು ಮತ್ತು ಕಾಳಸಂತೆ ವ್ಯಾಪಾರ ನಡೆಸುತ್ತಿದ್ದಕಾಗಿ ಇಲ್ಲಿಯ ನ್ಯಾಯಾಸ್ಥಾನದಲ್ಲಿ ವಿಚಾರಣೆಗೆ ಒಳಪಡಿಸಲಾಗಿದ್ದವರ ಪೈಕಿ 4 ಮಂದಿಗೆ ಮರಣ ದಂಡನೆಯೂ 16 ಮಂದಿಗೆ 3 ತಿಂಗಳಿಂದ 18 ವರ್ಷ ಗಳವರಿಗೂ ಸಜಾ ವಿಧಿಸಲಾಯಿತು

ಜಿನ್ನ – ಹೆಂಡರ್ಸನ್

ಕರಾಚಿ ಜ 20 — ಭಾರತದ ಅಂಡರ್ ಸೆಕ್ರಟರಿ ಮಿ|| ಹೆಂಡರ್‌ಸನ್ನರು ತಮ್ಮ ಲಂಡನ್ ವಾಪಸ್ ಪ್ರವಾಸಕ್ಕೆ ಈ ದಿನ ಇಲ್ಲಿಗೆ ಬರುವರು. ಮಿ|| ಜಿನ್ನರನ್ನು ಭೇಟಿ ಮಾಡುವರು.

ಲೀಗಿನ ಅಪ್ಪಣೆಯಂತೆ

ಕರಾಚಿ ಜ 20 — ರಾಜ್ಯಾಂಗ ಸಭೆ ಸೇರುವ ವಿಷಯದಲ್ಲಿ ಬಲೂಚಿ ಸ್ಥಾನವು ಲೀಗಿನ ಹೇಳಿಕೆಯಂತೆ ನಡೆಯುವುದಂತೆ.

ಸ್ಟಾಲಿನ್‌ರಿಗೆ ಚಿಂತೆಯೇ

ಲಂಡನ್ ಜ 21 — ರಷ್ಯಾ ವಿಷಯದಲ್ಲಿ ಬ್ರಿಟನ್ನಿನ ರೀತಿ ನೀತಿಯು ಜಾ|| ಸ್ಟಾಲಿನ್‌ರಿಗೆ ಚಿಂತೆಯುಂಟುಮಾಡಿದೆಯೆಂದು ಲಾರ್ಡ್ ಮಾಂಟ್‌ಗಮರಿಯು ವರು ಹೇಳಿದ್ದಾರೆ.

ಬೆಳವಾಡಿಗೆ ಸಚಿವ ಸಿದ್ದಪ್ಪನವರ ಭೇಟಿ

ಮರಾಮತ್ ಹಾಗೂ ಗ್ರಾಮಾಭಿವೃದ್ಧಿ ಶಾಖಾ ಸಚಿವರಾದ ಶ್ರೀ ಎಲ್ ಸಿದ್ದಪ್ಪನವರು ಮೈಸೂರು ಜಿಲ್ಲಾಧಿಕಾರಿಗಳಾದ ಶ್ರೀ ಜಿ. ಎಸ್. ನಾಗರಾಜ್ ರಾವ್ ಗ್ರಾಮಾಭಿವೃದ್ಧಿ ಶಾಖಾಧಿಕಾರಿ ಶ್ರೀ ಜಿ. ಎಸ್. ಪುಟ್ಟಣ್ಣನವರೊಡನೆ 19-1-47 ರಲ್ಲಿ ಬೆಳವಾಡಿ ಭೇಟಿಮಾಡಿ ಗ್ರಾಮ ಪರೀಕ್ಷೆ ಮಾಡಿದರು. ಅವರು ಅಲ್ಲಿ ನಡೆಯುತ್ತಿರುವ ತಸ್ಕೂರಿ ಬಾಶಿಕ್ಷಣ ಶಿಬಿರವನ್ನು ಕೂಲಂಕುಶವಾಗಿ ಪರಿಶೀಲಿಸಿದರು. ಶಿಬಿರದ ವ್ಯವಸ್ಥಾಪಕರಲ್ಲೊಬ್ಬರಾದ ಶ್ರೀ ಪಿ. ಎಂ. ಶಿವರಾಮು ರವರು ಅವರಿಗೆ ಶಿಬಿರದ ಕಾರ್ಯಕಲಾಪಗಳನ್ನು ವಿವರಿಸಿದರು. ಅವರು ವಿದ್ಯಾರ್ಥಿನಿಯರನ್ನು ಮಾತನಾಡಿಸಿ. ಅವರಿಂದ ಗ್ರಾಮಾಭಿವೃದ್ಧಿಗೆ ಹೆಚ್ಚಿನ ಸಹಾಯವಾಗುವುದೆಂದು ಆಶಿಸಿದರು.

ಗ್ರಾಮದ ಅಭಿವೃದ್ಧಿಗೆ ಅನೇಕ ಸಲಹೆಗಳನ್ನಿತ್ತು ಅವುಗಳ ಕೆಲಸಕಾರ್ಯಗಳಿಗಾಗಿ ರೂ. 1000 ಕೊಡಲೊಪ್ಪಿ ಮುಂದಿನ ಭೇಟಿಯ ಕಾಲಕ್ಕೆ ಗ್ರಾಮವನ್ನು ಇನ್ನಷ್ಟು ಚೊಕ್ಕಟವಾಗಿಡುವ ಕಾರ್ಯಕ್ರಮವನ್ನು ಕೈಗೊಳ್ಳತಕ್ಕದೆಂದು ಜೊತೆಯಲ್ಲಿದ್ದ ಅಧಿಕಾರಿ ವರ್ಗದವರಿಗೆ ಹೇಳಿದರು ಅವರು ಅಲ್ಲಿಂದ ಮುಂದೆ ರಾವಂದೂರಿಗೆ ಪ್ರಯಾಣ ಬೆಳೆಸಿದರು.

* ಗೂಬೆ ಚ್ಹೀಲಿಗೆ ಹೋಯಿತು

ಲಸ್ಬನ್ನಿನ ಮಾಟಗಾರ ನೂರ್ ಲೊರಿಯುಷ ಪೆರೇರಾ ದಸ್ತಗಿರಿ ಮಾಡಲ್ಪಟ್ಟನು. ತನ್ನ ಜೊತೆಯಲ್ಲಿ ತನ್ನ ಗೂಬೆಯನ್ನೂ ಬಂದೀಖಾನೆಗೆ ಕರೆದುಕೊಂಡು ಹೋದನು

ಅವನ ಆಶೆ ನೋಡಿ

ಮಾಜಿ ರೈಲ್ವೆ ಕೆಲಸಗಾರನೊಬ್ಬನು ಆಸ್ಟ್ರೇಲಿಯಾದ ಮುಂದಿನ ಗೌರ್ನರ್ ಜನರಲ್ ಪದವಿ ಪಡೆಯಲು ಒದ್ದಾಡುತ್ತಿದ್ದಾನೆ. ಅವನಿಗೆ 72 ವರ್ಷ ವಯಸ್ಸು, ಒಂದು ಕಾಲಿಲ್ಲ, 3 ಯುದ್ಧಗಳನ್ನು ಬಲ್ಲ-

For Quality Printing
L. N. Press
Sriramp et, MYSORE

— ರಾಜ್‌ಕಮಲ್ ಮೈಸೂರು —
22—1—47 ರಿಂದ ಪ್ರತಿದಿನ 3 ಆಟಗಳ
* ಸ್ವರ್ಣಲತಾ * ಸುನೇತ್ರ * ವೀಣಕುಮಾರಿ * ಬೇಬಿವಿಮಾನಾ
* ಬುಡೋ ಅದ್ವಾನಿ ಪಾತ್ರವಹಿಸಿರುವ
.... ಪ್ರತಿಜ್ಞಾ ....

At Ranjit_____ From 17—1—47
BANSARI
ಹಾಸ್ಯನಟ ಚಾರ್ಲಿ, ಈಶ್ವರ್‌ಲಾಲ್, ಪಮೀಂ, ದೀಕ್ಷಿತ್, ಕೇಸರಿ ಪಾತ್ರವಹಿಸಿರುವ
ಬನ್ನರಿ (ಹಿಂದಿ)

ಸುಖ ಆರೋಗ್ಯ ಆನಂದದಾಯಕ ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.
ಈ ಹಿಂಗಿನ ವುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.
ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.
ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಕ್ಯಾಂಪಲಿಗೆ ಬರೆಯಿರಿ —
ವಲ್ಲಭದಾಸ್ ತೇಜ್‌ಪಾಲ್,
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

At Opera — 2nd Glorious Week
PONNURUVI
ಪೊನ್ನುರುವಿ
ಅಭಿನಯ — ಕೊತ್ತಮಂಗಳಂ ಸೀನು ಕೆ. ಟಿ. ರುಕ್ಮಿಣಿ ಟಿ.ಎ. ದೊರೈರಾಜ್

ಸತ್ಯವಾದಿ
ದಿನ ಪತ್ರಿಕೆ. ತಿಂಗಳಿಗೆ ಆರಾಣೆ
ಸೋಮವಾರದ ಸಂಚಿಕೆ
ವಾರ್ಷಿಕಚಂದಾ
ಪರದೇಶಕ್ಕೆ ಅಂಚೆವೆಚ್ಚ ಸೇರಿ
Edited, Printed and Published by M. S Krishna Rao at the Satyavadi Press ChamarajAgrahar, M-----